ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 293 |
| ಸದಸ್ಯರ ಹೆಸರು | : | ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 03-02-2021. |
| ಉತ್ತರಿಸುವ ಸಚಿವರು | : | ಮಾನ್ಯ ಉಪಮುಖ್ಯಮಂತ್ರಿಗಳು,<br>ಲೋಕೋಪಯೋಗಿ ಇಲಾಖೆ |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ದೇವದುರ್ಗದಿಂದ ಗೂಗಲ್ ಮತ್ತು ಗೂಗಲ್‌ನಿಂದ ಸಂಕೇಶ್ವರಾಳ ರಸ್ತೆ ಕಾಮಗಾರಿ ಕಳೆದ 4 ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ) | ರಸ್ತೆ ಕಾಮಗಾರಿ ವಿಳಂಬವಾಗುವುದಕ್ಕೆ ಕಾರಣವೇನು; ಮತ್ತು ರಸ್ತೆ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಕೈಗೊಳ್ಳಲು ಸರ್ಕಾರ ಕೈಗೊಂಡ ಕ್ರಮವೇನು? | ಸರ್ಕಾರದ ಆದೇಶ ಸಂ ಲೋಇ 207 ಸಿಐಎಸ್ 2018, ಬೆಂಗಳೂರು, ದಿನಾಂಕ:02-11-2019 ರನ್ವಯ ಈ ಕೆಳಕಂಡ ಕಾಮಗಾರಿಗಳಗೆ ರೂ. 110.20 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರ ನೀಡಿರುತ್ತದೆ.<br><br>(1) ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗುಗಲ್ ವಾಯಾ ಅರಕೇರಾ, ಸುಂಕೇಶ್ವರಹಾಳ, (ಜಿ.ಮು.ರ) ರಸ್ತೆ ಕಿ.ಮೀ 0.00 ರಿಂದ 71.15 (ಆಯ್ದು ಭಾಗಗಳಲ್ಲಿ) ವರೆಗೆ ರಸ್ತೆ ಮರು ಸುಧಾರಣೆ ಮಾಡುವುದು. ಅಂದಾಜು ಮೊತ್ತ ರೂ 62.10 ಕೋಟಿಗಳು<br><br>(2) ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ದೇವದುರ್ಗ ದಿಂದ ಗೂಗಲ್ ವಾಯಾ ಕೊಪ್ಪರ (ಜಿ.ಮು.ರ)ರಸ್ತೆ ಕಿ.ಮೀ 0.00 ರಿಂದ 28.00 ವರೆಗೆ ರಸ್ತೆ ಮರು ಸುಧಾರಣೆ ಮಾಡುವುದು.<br>ಅಂದಾಜು ಮೊತ್ತ ರೂ 35.50 ಕೋಟಿಗಳು<br><br>(3) ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಅರಕೇರಾ ಕ್ರಾಸ್ ದಿಂದ ವಾಯಾ ಗಲಗ್ ನಾರಬಂಡಾ, ರಸ್ತೆ ಕಿ.ಮೀ.0.00 ರಿಂದ 28.20 (ಆಯ್ದು ಭಾಗಗಳಲ್ಲಿ)ವರೆಗೆ ರಸ್ತೆ ಸುಧಾರಣೆ ಮಾಡುವುದು. ಅಂದಾಜು ಮೊತ್ತ ರೂ 12.60 ಕೋಟಿಗಳು<br><br>ಮೇಲ್ಕಂಡ ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ: (2) & (3) ರಲ್ಲಿರುವ ಕಾಮಗಾರಿಗಳನ್ನು ಪ್ಯಾಕೇಜ್ ಕಾಮಗಾರಿಯನ್ನಾಗಿಸಿ ಇದನ್ನು ಕೈಗೊಳ್ಳಲು ಸರ್ಕಾರವು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಈಶಾನ್ಯ), ರವರು ಸಲ್ಲಿಸಿದ ಆರ್ಥಿಕ ಬಿಡ್ಡನ್ನು (ವರ್ಕ್ ಇಂಡೆಂಟ್ ನಂ.119899) ದಿನಾಂಕ:27-01-2021 ರಂದು ಅನುಮೋದಿಸಿರುತ್ತದೆ. ಕ್ರಮ ಸಂಖ್ಯೆ: (1) ರಲ್ಲಿನ ಕಾಮಗಾರಿಯ ಆರ್ಥಿಕ ಬಿಡ್ (ವರ್ಕ್ ಇಂಡೆಂಟ್ ನಂ.115862) ಸರ್ಕಾರದ ಪರಿಶೀಲನೆಯಲ್ಲಿದೆ. |

ಕಡತ ಸಂಖ್ಯೆ: ಲೋಇ 23 ಸಿಎನ್‌ಹೆಚ್ 2021 (ಇ)

(ಗೋವಿಂದ ಎಂ.ಕಾರಜೋಳ)
ಉಪಮುಖ್ಯಮಂತ್ರಿಗಳು
ಲೋಕೋಪಯೋಗಿ ಇಲಾಖೆ